ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 26-02-2019ರಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಇಲಾಖೆಯ ಇತರೆ ಹಿರಿಯ ಅಧಿಕಾರಿಗಳೊಡನೆ ನಡೆದ ವಿಡೀಯೊ ಸಂವಾದದ ನಡವಳಿಗಳು.

ಪ್ರಾರಂಭದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ವಿಡಿಯೋ ಸಂವಾದದ ಪ್ರಗತಿ ಪರಿಶೀಲನಾ ಸಭೆಗೆ ಸ್ವಾಗತವನ್ನು ಕೋರಿ ಈಗಾಗಲೇ ನಿಗದಿಪಡಿಸಿರುವ ವಿಷಯಸೂಚಿಯನ್ವಯ ಇಂಧೀಕರಿಸಿದ ಮಾಹಿತಿಯನ್ನು ಎಲ್ಲರಿಗೂ ತಲುಪಿಸಲಾಗಿದ್ದು, ಅದರಂತೆ ಮುಂದಿನ ವಿಡಿಯೋ ಸಂವಾದ ನಡೆಸಿಕೊಡಲು ಮಾನ್ಯ ಸಚಿವರನ್ನು ಕೋರಿದರು.

ಪ್ರಾರಂಭದಲ್ಲಿ ಲೆಕ್ಕಶೀರ್ಷಿಕೆ 3054 ರಸ್ತೆಗಳ ಬಾಬ್ತಿಗೆ ಸಂಬಂಧಿಸಿದಂತೆ ಮತ್ತು ರಸ್ತೆ ನಿರ್ವಹಣಾ ಅನುದಾನದಡಿ ಟಾಸ್ಕ್‌ಫೋರ್ಸ್ ಸಲುವಾಗಿ ಬಿಡುಗಡೆ ಮಾಡಿದ ಅನುದಾನದ ಪ್ರಗತಿ ಪರಿಶೀಲಿಸಲಾಯಿತು. ಶೂನ್ಯ ಪ್ರಗತಿ ದಾಖಲಾಗಿರುವ ಬೀದರ್, ಮೈಸೂರು, ಕೊಪ್ಪಳ, ವಿಜಯಪುರ, ಯಾದಗಿರಿ, ಶಿವಮೊಗ್ಗ, ಬೆಳಗಾವಿ, ರಾಯಚೂರು ಜಿಲ್ಲೆಗಳಿಗೆ ತಕ್ಷಣ ಪ್ರಗತಿ ತೀವ್ರಗೊಳಿಸಿ ಭೌತಿಕ ಮತ್ತು ಆರ್ಥಿಕ ಸಾಧನೆಗಳ ವಿವರಗಳನ್ನು ದಾಖಲಿಸಲು ಸೂಚಿಸಲಾಯಿತು. ಎಲ್ಲಾ ಜಿಲ್ಲೆಗಳು ಲೆಕ್ಕಶೀರ್ಷಿಕೆ 3054 ನಲ್ಲಿ ಟಾಸ್ಕ್‌ಫೋರ್ಸ್ ಅನುದಾನ ಮತ್ತು ಲಿಂಕ್ ಡಾಕ್ಯುಮೆಂಟ್ ನಡಿಯಲ್ಲಿ ಹಂಚಿಕೆಯಾಗಿರುವ ಅನುದಾನವನ್ನು ಗಮನದಲ್ಲಿಟ್ಟುಕೊಂಡು 31 ಮಾರ್ಚ್ 2019 ರೊಳಗಾಗಿ 100% ಸಾಧನೆಯಾಗುವ ರೀತಿ ನೋಡಿಕೊಳ್ಳಬೇಕೆಂದು ಸೂಚಿಸಲಾಯಿತು. ರಸ್ತೆಗಳಿಗೆ ಸಂಬಂಧಿಸಿದಂತೆ ಕೆಲವು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಡಳಿತಾತ್ಮಕ ಸಮಸ್ಯೆಗಳು ಮತ್ತು ಗೊಂದಲಗಳ ಬಗ್ಗೆ ಪ್ರಸ್ತಾಪಿಸಿ ಸ್ಪಷ್ಟೀಕರಣ ಪಡೆದುಕೊಂಡರು. ಇದಾದ ತರುವಾಯ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಕ್ರಮಗಳಡಿ ಮಾಹಿತಿ ನಿರ್ವಹಣೆ ಮತ್ತು ಇಂಧೀಕರಣ ಮಾಡುವ ರೀತಿಯೇ ರಸ್ತೆಗಳಿಗೂ ಸಂಬಂಧಿಸಿದಂತೆ ನಿರ್ದೇಶಕರು, ಗ್ರಾಮ ವಿಕಾಸ ಹಾಗೂ ಮುಖ್ಯ ಇಂಜಿನೀಯರ್, PRED ಇವರುಗಳು ಸಮನ್ವಯದಲ್ಲಿ ಕಾಲಕಾಲಕ್ಕೆ ಪ್ರಗತಿ ಪರಿಶೀಲನೆ ಮಾಡಿ ಮಾಹಿತಿ ಇಂಧೀಕರಿಸಬೇಕೆಂದು ಸೂಚಿಸಲಾಯಿತು. ಟಾಸ್ಕ್‌ಫೋರ್ಸ್ ನಡಿ ರಸ್ತೆಗಳಿಗಾಗಿ ರೂ.122.66 ಕೋಟಿ ಲಭ್ಯವಿದ್ದರೂ ವೆಚ್ಚ ಕೇವಲ ರೂ.5.21 ಕೋಟಿಯಾಗಿರುವುದು ಅತ್ಯಂತ ಕಳಪೆ ಪ್ರಗತಿಯೆಂದು ತಿಳಿಸಿ ಎಚ್ಚರಿಕೆ ನೀಡಲಾಯಿತು. ಅದೇ ರೀತಿ 3054 ಲಿಂಕ್ ಡಾಕ್ಯುಮೆಂಟ್ ನಡಿ ಲಭ್ಯವಿರುವ ರೂ.155 ಕೋಟಿಗಳಲ್ಲಿ ವೆಚ್ಚ ಕೇವಲ ರೂ.17.00 ಕೋಟಿಯಾಗಿರುವುದನ್ನು ಸಹಾ ಗಂಭೀರವಾಗಿ ಪರಿಗಣಿಸಿ ಪ್ರಗತಿ ತ್ವರಿತಗೊಳಿಸಲು ಸೂಚಿಸಲಾಯಿತು.

NABARD ರಸ್ತೆಗಳು SCP/TSP ನಡಿ ಪ್ರಗತಿ ತೀವ್ರಗೊಳಿಸಿ ಈಗಾಗಲೇ ಲೆಕ್ಕಶೀರ್ಷಿಕೆ 5054 ರಲ್ಲಿನ ಮೂಲ ಹಂಚಿಕೆ ಪ್ರಕಾರ ಹಿಂಬಾಲಿಸಿ ಅನುದಾನ ಪಡೆದುಕೊಳ್ಳಲು ನಿರ್ದೇಶಕರು ಗ್ರಾಮ ವಿಕಾಸ ರವರಿಗೆ ಸೂಚಿಸಲಾಯಿತು. NABARD/RIDF ನಡಿ ಅನುದಾನದ ಅಗತ್ಯತೆ ಇಲ್ಲದಿದ್ದಲ್ಲಿ ಅನುದಾನ ಬಳಕೆಯಾಗದೇ ಉಳಿತಾಯವಾಗುವ ಸಂಭವ ಇದ್ದಲ್ಲಿ ಇತರೆ ಜಿಲ್ಲೆಗೆ ಹಂಚಿಕೆ ಮಾಡಲು ಜಾಗ್ರತೆಯಾಗಿ ಕ್ರಮವಹಿಸಲು ಸೂಚಿಸಲಾಯಿತು.

ಲೆಕ್ಕಶೀರ್ಷಿಕೆ 4702 NABARD ಕೆರೆಗಳು ಈ ಅಂಕಣದಲ್ಲೂ ಸಹ ಅದೇ ರೀತಿ ಕಡಿಮೆ ಪ್ರಗತಿಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು.

ರಸ್ತೆಗಳಿಗೆ 10/07/2018 ರಂದು ಹಾಗೂ ಕೆರೆಗಳ ಬಾಬ್ತು Oct-2018 ರಲ್ಲಿಯೇ ಅನುದಾನ ಹಂಚಿಕೆ ಮತ್ತು ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ನೀಡಿದ್ದರೂ, ನಿರೀಕ್ಷಿತ ಪ್ರಗತಿಯಾಗದಿರುವುದು ಆಡಳಿತಯಂತ್ರ ಚುರುಕಾಗಿಲ್ಲವೆಂದು ಕಂಡುಬರುವುದರಿಂದ ವಿಳಂಬ ಮಾಡದೇ ಟೆಂಡರ್ ಪ್ರಕ್ರಿಯೆ ತಕ್ಷಣ ಪೂರ್ಣಗೊಳಿಸಿ ಕಾರ್ಯಾದೇಶಗಳನ್ನು ನೀಡಲು ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶಿಸಲಾಯಿತು.

ಅದೇ ರೀತಿ ಸುವರ್ಣ ಗ್ರಾಮ ಯೋಜನೆ ಮತ್ತು ಗ್ರಾಮ ವಿಕಾಸ ಯೋಜನೆಯಡಿ ಮುಂದುವರಿದಿರುವ ಎಲ್ಲಾ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿಯೇ ಪೂರ್ಣಗೊಳಿಸುವ ಸಲುವಾಗಿ ಪ್ರಗತಿ ಸಾಧಿಸಲು ಸೂಚಿಸಲಾಯಿತು.

**(ಕ್ರಮ: ನಿರ್ದೇಶಕರು ಸುವರ್ಣ ಗ್ರಾಮ, CE, PRED, ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮು.ಕಾ.ನಿ ಗಳು)**

ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ ಆಯುಕ್ತರು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ರವರು ಒಟ್ಟಾರೆ ರೂ.2200.00 ಕೋಟಿಗಳು ಕುಡಿಯುವ ನೀರಿನ ಬಾಬ್ತು ಲಭ್ಯವಾಗಿದ್ದು ರೂ.1514.27 ಕೋಟಿಗಳು ವೆಚ್ಚವಾಗಿರುವುದಾಗಿ ತಿಳಿಸಿ ಉಳಿದಿರುವ ಅನುದಾನವನ್ನು ಮಾರ್ಚ್ ಮತ್ತು ಏಪ್ರಿಲ್ 2019 ಮಾಹೆಯೊಳಗೆ ಅನುಮೋದನೆಯಾಗಿ ಮುಂದುವರಿದಿರುವ ಯೋಜನೆಗಳಿಗಾಗಿ ವಿನಿಯೋಗಿಸಿ ಉಪಯೋಗಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಂಡಿರುವುದಾಗಿ ಮಾನ್ಯ ಸಚಿವರಿಗೆ ವಿವರಿಸಿದರು. ತದನಂತರ NRDWP ಮತ್ತು ಟಾಸ್ಕ್‌ಫೋರ್ಸ್ ಹಾಗೂ ನೀರು ಶುದ್ಧೀಕರಣ ಘಟಕಗಳ ಸ್ಥಾಪನೆ ಮತ್ತು RWS ಯೋಜನೆಗಳ ಅನುಷ್ಠಾನ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆ ಅನುಷ್ಠಾನ ಕುರಿತಂತೆ ಜಿಲ್ಲಾವಾರು ಪ್ರಗತಿ ಪರಿಶೀಲನೆ ಮಾಡಲಾಯಿತು. ಹಿಂದಿನ ಸಭೆಗಳಲ್ಲಿ ನಿರ್ದೇಶನ ನೀಡಿ ನಡವಳಿಗಳನ್ನು ಅನುಪಾಲನೆಗಾಗಿ ಕಳುಹಿಸಿದ್ದರೂ ಸಹಾ ನಿರೀಕ್ಷಿತ ಸಾಧನೆಯಾಗದಿರುವುದರಿಂದ ಇನ್ನೂ ಹೆಚ್ಚಿನ ಆದ್ಯತೆ ವಹಿಸಿ ಜವಾಬ್ದಾರಿಯಿಂದ ಕೆಲಸ ಮಾಡಲು ಸೂಚಿಸಿ ಕೆಳಕಂಡ ನಿರ್ಣಯಗಳನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯಸ್ಥರುಗಳಿಗೆ ತಿಳಿಸಲಾಯಿತು;

- < ರೂ.5ಲಕ್ಷ ಅಂದಾಜು ಮೊತ್ತದ ಉಳಿದ 99 ಕಾಮಗಾರಿಗಳಿಗೆ 3 ದಿನದೊಳಗಾಗಿ ಕಾರ್ಯಾದೇಶ ನೀಡತಕ್ಕದ್ದು.
- OHT ಗಳ ನಿರ್ಮಾಣದ ಪ್ರಗತಿ ಇತರೆ ಕುಡಿಯುವ ನೀರಿನ ಕಾಮಗಾರಿಗಳಿಗೆ ಪೂರಕವಾಗಿರಬೇಕು. ಅನುಮೋದನೆಯಾಗಿ ಕೈಗೆತ್ತಿಕೊಂಡಿರುವ OHT ಗಳ ನಿರ್ಮಾಣ 3 ತಿಂಗಳೊಳಗಾಗಿ ಪೂರ್ಣಗೊಳ್ಳತಕ್ಕದ್ದು.
- WPP ಟೆಂಡರ್ defaulters ಗಳಿಗೆ ಸಂಬಂಧಿಸಿದಂತೆ ಕೂಡಲೇ ಸಂಬಂಧಿಸಿದ ಕಾರ್ಯಪಾಲಕ ಇಂಜಿನೀಯರುಗಳು ಅನುಮೋದಿತ ಟೆಂಡರನ್ನು ರದ್ದುಗೊಳಿಸಿ ಮುಂದಿನ ಪ್ರಕ್ರಿಯೆ ಪ್ರಾರಂಭಿಸತಕ್ಕದ್ದು. ಇದಕ್ಕಾಗಿ ಪ್ರಶ್ನಿತ ಕಾಮಗಾರಿಗಳು/ಯೋಜನೆಗಳು ಸರ್ಕಾರದಿಂದ **ಅಥವಾ** ಮುಖ್ಯ ಇಂಜಿನೀಯರ್ RWS ರವರಿಂದ ಅನುಮೋದನೆಯಾಗಿದ್ದರೂ ಸಹಾ ಅದನ್ನು ರದ್ದು

ಪಡಿಸುವ ಅಧಿಕಾರ ಟೆಂಡರ್ ಕರೆಯುವ ಪ್ರಾಧಿಕಾರಕ್ಕೆ ಇರುತ್ತದೆಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು. ಈ ನಿಯಮವು WPP ಅಲ್ಲದೇ ಎಲ್ಲಾ ಅನುಮೋದಿತ ಟೆಂಡರ್ ಪ್ರಕರಣಗಳಿಗೂ ಅನ್ವಯಿಸುತ್ತದೆ.

- >ರೂ.5ಲಕ್ಷ ಕುಡಿಯುವ ನೀರಿನ ಕಾಮಗಾರಿಗಳ ಪ್ರಗತಿಯನ್ನು ತೀವ್ರಗೊಳಿಸುವುದು.
- ರಾಯಚೂರು MVS ಯೋಜನೆಗಳ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ, CE, RWS ತಕ್ಷಣ ಕಾರ್ಯಸಿಂಧುತ್ವಗಳನ್ನು ಪರಿಶೀಲಿಸಿ ಅನುಮೋದನೆ ಪ್ರಕ್ರಿಯೆ ಪೂರ್ಣಗೊಳಿಸುವುದು.
- ಕೊಪ್ಪಳ ಜಿಲ್ಲಾ ಪಂಚಾಯತಿಯಲ್ಲಿ ಅಗತ್ಯವಿಲ್ಲದಿರುವ ರೂ.5ಲಕ್ಷಕ್ಕೂ ಮೇಲ್ಪಟ್ಟ 4 ಕಾಮಗಾರಿಗಳನ್ನು ಕೈಬಿಡುವುದು.
- ರಾಜ್ಯ ಮತ್ತು ಕೇಂದ್ರ ವಲಯದಡಿ ಅನುಮೋದನೆಯಾಗಿ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ವೆಚ್ಚಗಳನ್ನು ಗ್ರಾಅಪ ಇಲಾಖೆಯ ಪಂಚತಂತ್ರ ತಂತ್ರಾಂಶದಡಿ, ಗಾಂಧಿಸಾಕ್ಷಿ ಕಾಯಕದಲ್ಲಿ ಮತ್ತು ಕೇಂದ್ರ ಸರ್ಕಾರದ IMIS ನಲ್ಲಿ ಪಾರದರ್ಶಕವಾಗಿ ದಾಖಲಿಸಬೇಕು.
- ಎಲ್ಲಾ ಮುಂದುವರಿದ ಹಾಗೂ ಹಳೆಯ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿಯೇ ಪೂರ್ಣಗೊಳಿಸಿ ವೆಚ್ಚ ಭರಿಸತಕ್ಕದ್ದು.
- 2015–16 ರ ಹಿಂದಿನ ಹಾಗೂ ತದನಂತರ 2018–19 ರ ವರೆಗೆ IMIS ನಲ್ಲಿ ದಾಖಲಿಸಿರುವ ಎಲ್ಲಾ Spillover Work ಗಳನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕು. ಉಳಿದ ಎಲ್ಲಾ ಕೆಲಸಗಳನ್ನು ಯಾವುದೇ ಕಾರಣಕ್ಕೂ 2019–20 ರ ಸಾಲಿನಲ್ಲಿ ಮುಂದುವರಿಸತಕ್ಕದ್ದಲ್ಲ (except 2018-19 major RWS works taken up for implementation).
- ಬಾಕಿ ಉಳಿದ ಎಲ್ಲಾ ಹಳೆಯ ಗ್ರಾನೀಸ ಕಾಮಗಾರಿಗಳನ್ನು IMIS ನಲ್ಲಿ (as is where is condition) ಮುಕ್ತಾಯಗೊಳಿಸುವುದು, ಇಲ್ಲವೇ delete ಮಾಡತಕ್ಕದ್ದು. ಅಂತಹ ಕಾಮಗಾರಿಗಳನ್ನು ಚಾಲ್ತಿ NRDWP ಮಾರ್ಗಸೂಚಿಗಳನ್ವಯ ಅಗತ್ಯತೆಯನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಹೊಸ ಕಾಮಗಾರಿಗಳಾಗಿ 2019–20 ರ ಸಾಲಿನಲ್ಲಿ ಪ್ರಸ್ತಾಪಿಸಲು ಪರಿಶೀಲಿಸಬಹುದು.
- SLSSC ಅಧ್ಯಕ್ಷರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು 2019–20 ರಲ್ಲಿ ಕೆಲವು ವಿಶೇಷ ಯೋಜನೆಗಳನ್ನು ಹೊರತುಪಡಿಸಿ, ಹಿಂದಿನ ಸಾಲಿನ RWS ಕಾಮಗಾರಿಗಳನ್ನು on going ಕಾಮಗಾರಿಗಳೆಂದು ಮುಂದುವರಿಸಲು ಅನುಮತಿ ನೀಡುವುದಿಲ್ಲ.
- ಚಿಕ್ಕಮಗಳೂರು ಜಿಲ್ಲೆ, ಕಡೂರು, ಅಜ್ಜಂಪುರ, ತರಿಕೆರೆ, ಲಕ್ಯಾ ಹೋಬಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ಟಾಸ್ಕ್‌ಫೋರ್ಸ್ ಯೋಜನೆಯಡಿ ಕೂಡಲೇ ಕಾರ್ಯಸಿಂಧುತ್ವವಿರುವ ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸತಕ್ಕದ್ದು.

- WPP ಘಟಕಗಳ ಸ್ಥಾಪನೆ, ಅನುಷ್ಠಾನ ಮತ್ತು ಕಾರ್ಯಗತಗೊಳಿಸುವ ಹಾಗೂ ತದನಂತರದ O&M ಸಲುವಾಗಿ ಈಗಾಗಲೇ ಆಯುಕ್ತರು ಗ್ರಾನೀಸ ತಿಳಿಸಿರುವ ರೀತಿ ಸಮರ್ಪಕ ನಿರ್ವಹಣಾ ವ್ಯವಸ್ಥೆ ಮಾಡಿಸತಕ್ಕದ್ದು. KRIDL ಪ್ರಾರಂಭಿಸದಿರುವ ಯಾವುದೇ WPP ಇದ್ದಲ್ಲಿ ಸ್ಥಳೀಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಪೂರ್ಣವಾಗಿ ಸದರಿ ಆದೇಶ ಮತ್ತು ಅನುದಾನ ಹಿಂಪಡೆದು ಈಗಾಗಲೇ ಹಿಂದಿನ ಸಭೆಯ ನಡವಳಿಗಳಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ, ನಿಯಮಾನುಸಾರ ಅನುಮೋದಿತ ಸಂಸ್ಥೆಗಳಿಗೆ ಕಾರ್ಯಾದೇಶ ನೀಡತಕ್ಕದ್ದು.
- 2019-20 ರ ಸಾಲಿನ ಕ್ರಿಯಾಯೋಜನೆ ಸಂಬಂಧ ಸರ್ಕಾರದಿಂದ ಸೂಕ್ತ ಮಾರ್ಗಸೂಚಿಗಳನ್ನು ಮತ್ತು ಜಿಲ್ಲಾವಾರು ಲಭ್ಯವಿರುವ ಸಂಭವನೀಯ ಅನುದಾನವನ್ನು ಪ್ರತ್ಯೇಕವಾಗಿ ಏಪ್ರಿಲ್-2019 ರಲ್ಲಿ ತಿಳಿಸುವುದು.
- ಸ್ವಚ್ಛ ಭಾರತ್ ಮಿಷನ್ ನಡಿ Geo tag ಮತ್ತು e-FMS ಮಾಡುವಲ್ಲಿ ವಿಳಂಬಧೋರಣೆ ಹಾಗೂ Online IMIS Updation ಮಾಡದಿರುವ ಕುರಿತು ರಾಯಚೂರು, ಬೀದರ್, ಬಳ್ಳಾರಿ, ಯಾದಗಿರಿ, ಬೆಂಗಳೂರು(ಗ್ರಾಮೀಣ), ಗದಗ್, ಚಿತ್ರದುರ್ಗ ಜಿಲ್ಲಾ ಪಂಚಾಯತಿಗಳಿಗೆ ಒಂದು ವಾರದೊಳಗಾಗಿ ಮಾಹಿತಿ ಇಂಧೀಕರಿಸಲು ಸೂಚಿಸಲಾಯಿತು.
- SBM ನಡಿ ಅನರ್ಹ ವೈಯಕ್ತಿಕ ಫಲಾನುಭವಿಗಳ ವಿವರಗಳನ್ನು delete ಮಾಡಬೇಕು.
- ಮನೆ-ಮನೆ ಸಮೀಕ್ಷೆ ಮಾಡಿ ಆಧಾರ್ ಕಾರ್ಡ್ ಮತ್ತು ಕಾರ್ಯಾದೇಶ ಯಾರಿಗೆ ನೀಡಲಾಗಿದೆಯೋ ಅವರಿಗೆ/ಅವರ ಖಾತೆಗೆ ಸಹಾಯಧನ ಪಾವತಿಯಾಗತಕ್ಕದ್ದು.
- ವ್ಯತ್ಯಯಗಳು ಮತ್ತು ತಪ್ಪು ವಿವರಗಳ ದಾಖಲೆಯನ್ನು ಪುನರ್ ಪರಿಶೀಲಿಸಿ IMIS ನಲ್ಲಿ ಫಲಾನುಭವಿಗಳನ್ನು ನಮೂದಿನಿಂದ ಕಾಲಮಿತಿಯೊಳಗೆ ತೆಗೆದುಹಾಕಲು ಜನವರಿ-2019 ಅಂತಿಮ ಗಡುವಾಗಿತ್ತು. ಮಾರ್ಚ್-2019ರ ನಂತರ ಯಾವುದೇ ಹೊಸ ಸೇರ್ಪಡೆ, ಹಳೆಯ ಪಾವತಿಗಳಿಗೆ ಅವಕಾಶವಿರುವುದಿಲ್ಲ. ಆದುದರಿಂದ ಜಾಗ್ರತೆಯಾಗಿ ಕಾಲಮಿತಿಯೊಳಗೆ online ನಲ್ಲಿ ಮಾಹಿತಿ ಇಂಧೀಕರಿಸಲು ಕ್ರಮವಹಿಸತಕ್ಕದ್ದು.
- ಚುನಾವಣಾ ನೀತಿ ಸಂಹಿತೆ ಬಂದ ತರುವಾಯ ಯಾವುದೇ ಕುಡಿಯುವ ನೀರು ಮತ್ತು ಶೌಚಾಲಯ ಬಾಬ್ತಿನ ಆದೇಶಗಳನ್ನು ನೀಡಲು ಬರುವುದಿಲ್ಲ. ಆದುದರಿಂದ ಜಾಗೃತೆಯಾಗಿ ಎಲ್ಲಾ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಕಾರ್ಯೋನ್ಮುಖರಾಗತಕ್ಕದ್ದು.
- ಸ್ವಚ್ಛ ಭಾರತ್ ಅಭಿಯಾನ್ ನಡಿ ಅಗತ್ಯವಿರುವ ಹೊರಗುತ್ತಿಗೆ ಸಿಬ್ಬಂದಿಗಳನ್ನು ಚಾಲ್ತಿ ಮಾರ್ಗಸೂಚಿಗಳನ್ವಯ ನೇಮಕ ಮಾಡಿಕೊಂಡು ಉದ್ದೇಶಿತ ಗುರಿ ಸಾಧನೆ ಸಲುವಾಗಿ ಮುನ್ನಡೆಯಬೇಕು.

(ಕ್ರಮ: ಆಯುಕ್ತರು ಗ್ರಾನೀಸ, ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ ಗಳು)

- ನರೇಗಾ ಕಾರ್ಯಕ್ರಮದಡಿ ಪ್ರಗತಿ ಪರಿಶೀಲನೆ ಮಾಡಿ ಮಾರ್ಚ್-2019ರವರೆಗೆ ಪರಿಷ್ಕೃತ 10 ಕೋಟಿ ಮಾನವ ದಿನಗಳ ಗುರಿ ಸಾಧನೆ ಸಲುವಾಗಿ ಕೈಗೊಳ್ಳಬೇಕಾದ ಜರೂರು ಕ್ರಮಗಳು 2019-20ರ ಸಾಲಿಗೆ 12 ಕೋಟಿ ಮಾನವ ದಿನಗಳ ಉದ್ಯೋಗ ಗುರಿ ಸೃಜನೆ ಸಾಧನೆಗಾಗಿ ಹಾಗೂ ರೂ.5554.00ಕೋಟಿ ಅನುದಾನ ವಿನಿಯೋಗ ಸಲುವಾಗಿ ಕ್ರಿಯಾ ಯೋಜನೆ ಅನುಷ್ಠಾನ ಕುರಿತಂತೆ

ಆಯುಕ್ತರು ನರೇಗಾ, ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ತುರ್ತು ವಿಧಿ ವಿಧಾನಗಳನ್ನು ತಿಳಿಸಿದರು. ತದನಂತರ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

- ರೂ.2ಕೋಟಿಗೂ ಹೆಚ್ಚಿನ ಮೊತ್ತದ ವೆಚ್ಚದ ವಾಹಿವಾಟನ್ನು ಚಾಲ್ತಿ ಮಾರ್ಗಸೂಚಿಗಳನ್ವಯ ಸರಿಯಾಗಿ ದಾಖಲಿಸದಿರುವ ಜಿಲ್ಲಾ ಪಂಚಾಯತ್‌ಗಳು ಹಾಗೂ ತಪಾಸಣೆ ಪೂರ್ಣಗೊಳಿಸಿದ 92 ಗ್ರಾಮ ಪಂಚಾಯತ್‌ಗಳಿಗೆ ಸಂಬಂಧಿಸಿದ (ರಾಯಚೂರು, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ತುಮಕೂರು, ಬೆಳಗಾವಿ, ಹಾಸನ, ರಾಮನಗರ, ಗದಗ ಮತ್ತು ಕೋಲಾರ) 11 ಜಿಲ್ಲಾ ಪಂಚಾಯತ್‌ಗಳು ತಕ್ಷಣ ಕಾರ್ಯೋನ್ಮುಖವಾಗುವುದು.
- FTOs Regeneration ಆಗದಿರುವ ಬೆಂಗಳೂರು, ಬಳ್ಳಾರಿ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತಿಗಳು ತಕ್ಷಣ ಕ್ರಮವಹಿಸುವುದು.
- ಮಾರ್ಚ್-2019ರ ಮೊದಲವಾರದೊಳಗೆ 2019-20ನೇ ಸಾಲಿನ 12 ಕೋಟಿ ಮಾನವದಿನಗಳ ಉದ್ಯೋಗ ಸೃಜನೆವಾರು ವಿವರಗಳನ್ನು ತಾಲ್ಲೂಕ ಪಂಚಾಯತ್‌ವಾರು, ಜಿಲ್ಲಾ ಪಂಚಾಯತ್ ವಾರು, ಮಾಹೆ ವಯಿ ಮತ್ತು line department ವಾರು ಹಂಚಿಕೆ ಮಾಡಿ ಸರ್ಕಾರಕ್ಕೆ ತಿಳಿಸಬೇಕು.
- ಎಲ್ಲಾ ಕಾಮಗಾರಿಗಳನ್ನು GPDP ಯಡಿ ತಕ್ಷಣ ದಾಖಲಿಸಬೇಕು. ಹೀಗೆ ಮಾಡಿದಾಗ ಚುನಾವಣಾ ನೀತಿ ಸಂಹಿತೆ ಸಮಸ್ಯೆ ಉದ್ಭವಿಸುವುದಿಲ್ಲ.
- ವಿಶೇಷ ಅಭಿವೃದ್ಧಿ ಕಾರ್ಯಕ್ರಮದ ಮಾರ್ಗಸೂಚಿಗಳ (SDP) ಪ್ರಕಾರ GP ಗಳಿಗೆ ಹೆಚ್ಚಿನ ಅನುದಾನ ಹಂಚಿಕೆಯಾಗಬೇಕು.
- ಇನ್ನು ಮುಂದೆ Manual Estimatesಗೆ ಅವಕಾಶವಿರುವುದಿಲ್ಲ. ಕಾರಣ ಈಗಾಗಲೇ Master Trainers ಎಲ್ಲಾ ಜಿಲ್ಲೆಗಳಿಗೆ ಬಂದು ತರಬೇತಿ ನೀಡಿ ಅರಿವು ಮೂಡಿಸಿದ್ದಾರೆ. "Secure" ತಂತ್ರಾಂಶದಡಿ ಇನ್ನು ಮುಂದೆ ಅಂದಾಜು ಪಟ್ಟಿ ಪ್ರಕ್ರಿಯೆ ಮತ್ತು ದಾಖಲೆಗಳು ಸುಲಭವಾಗಿ ಚಾಲನೆಯಾಗಲಿವೆ.
- Line Department ಗಳಿಗೆ ಮಾನವ ದಿನಗಳ ಹಂಚಿಕೆ ಮಾಡುವಾಗ link document ನಲ್ಲಿರುವ ಅನುದಾನಕ್ಕೆ ಆಯಾ ಇಲಾಖೆಗಳು ನೀಡಿರುವ ಗುರಿ ಮತ್ತು ಕಾಮಗಾರಿಗಳು ಇವುಗಳನ್ನು ಗಮನದಲ್ಲಿಟ್ಟುಕೊಂಡು ನರೇಗಾ ದಡಿ ಗುರಿ ನಿಗದಿಪಡಿಸಬೇಕು.
- ಈಗಾಗಲೇ 2 ಜಿಲ್ಲಾ ಪಂಚಾಯತ್‌ಗಳಿಗೆ GIS ಆಧಾರಿತ ಯೋಜನಾ ವ್ಯವಸ್ಥೆ ಆಗಿದೆ. FTO ಗೆ (Second Signatory) ಕಾಲಮಿತಿ 8 ದಿನಗಳಿವೆ. ಪ್ರಸಕ್ತ ಸಾಲಿನಲ್ಲಿ ಶಾಲಾ ಕಾಂಪೌಂಡ್, ದನದ ಕೊಟ್ಟಿಗೆಗಳನ್ನು ಕೈಗೊಳ್ಳಬೇಕು. ಇದಲ್ಲದೆ, ಪರ್ಯಾಯವಾಗಿ ಋತು ಆಧಾರಿತ ಕಾಮಗಾರಿಗಳನ್ನು ಅಳವಡಿಸಬೇಕು. ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ವಿಧಾನ ಅಳವಡಿಸುವುದು ಹಾಗೂ ವೈಜ್ಞಾನಿಕ ತಳಹದಿಯಲ್ಲಿ Borewell ಗಳ Recharge, ಸಸಿ ನೆಡುವುದು. ಜಲ ಸಂರಕ್ಷಣೆ ಹಾಗೂ ಅದರ ಮಹತ್ವದ ಬಗ್ಗೆ ಅರಿವು

ಮೂಡಿಸುವುದು ಮತ್ತು ಈ ವಿಷಯಾಧಾರಿತ ಚರ್ಚಾ ಸ್ಪರ್ಧೆ ಇವುಗಳನ್ನು ಗ್ರಾಮ ಮಟ್ಟದಲ್ಲಿ ಏರ್ಪಡಿಸುವುದು ಆಗಬೇಕು.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ ಗಳು)

- ಗ್ರಾಮ ಪಂಚಾಯತ್ ವಿಷಯಗಳ ಬಗ್ಗೆ ಚರ್ಚಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪಂಚಾಯತ್ ರಾಜ್‌ಗೆ ಕೆಳಕಂಡ ಸೂಚನೆಗಳನ್ನು ನೀಡಲಾಯಿತು.
    - ಪಂಚಾಯತಿ ಅಭಿವೃದ್ಧಿ ಅಧಿಕಾರಿವಾರು ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮತ್ತು GPDP arrears ಹಾಗೂ GPDP/Plan plus ದಾಖಲೆ ಸಂಬಂಧ ಗುರಿ ನಿಗದಿ ಪಡಿಸಿ ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು notice ನೀಡಿ ಪ್ರಗತಿ ಹಿಂಬಾಲಿಸಬೇಕು.
    - ತೆರಿಗೆ ಪರಿಷ್ಕರಣೆ ಸಲುವಾಗಿ ಇನ್ನೂ 4800 ಗ್ರಾಮ ಪಂಚಾಯತ್‌ಗಳು ಕ್ರಮ ವಹಿಸದಿರುವುದನ್ನು ಈಗಾಗಲೇ ತಿಳಿಸಲಾಗಿದ್ದು ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅದನ್ನು ಹಿಂಬಾಲಿಸಬೇಕು.
    - ಲೆಕ್ಕ ಮರುಹೊಂದಾಣಿಕೆ (Bank Reconciliation) ತಃಖ್ತೆಯನ್ನು ಪಂಚತಂತ್ರ ವ್ಯವಸ್ಥೆಯಡಿ Streamline ಮಾಡಬೇಕು. ಈ ಮೂಲಕ ತಾತ್ಕಾಲಿಕ ಹಣ ದುರುಪಯೋಗ ತಡೆಯಬೇಕು.
- ಇತ್ತೀಚಿಗೆ ರಸ್ತೆಗಳು, ತಾಲ್ಲೂಕು ಪಂಚಾಯತಿ ಕಟ್ಟಡಗಳು ಮತ್ತು ಜಿಲ್ಲಾ ಪಂಚಾಯತ್ ಕಟ್ಟಡಗಳಿಗೆ Reappropriation ಮಾಡಿದ (ಅನುದಾನ ಪುನರ್ ವಿನಿಯೋಗ) ಅನುದಾನವನ್ನು ಬೇಡಿಕೆಯಾಧರಿಸಿ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಿದೆ. ಈ ಅನುದಾನ ನೇರವಾಗಿ ಆರ್ಥಿಕ ಇಲಾಖೆಯಿಂದ ಜಿಲ್ಲಾ/ತಾಲ್ಲೂಕು ಪಂಚಾಯತಿ ವಲಯದ ಲೆಕ್ಕಶೀರ್ಷಿಕೆಯಡಿ ಬಿಡುಗಡೆಯಾಗಿದ್ದು, ತತ್ಸಂಬಂಧದ ಅನುದಾನ ವಿನಿಯೋಗ ಸಲುವಾಗಿ ಸರ್ಕಾರದಿಂದ ಅನುದಾನ ವಿನಿಯೋಗದ ವಿಧಿ-ವಿಧಾನಗಳನ್ನು ತಿಳಿಸಲಾಗಿದೆ. ಅವುಗಳನ್ನು ಅನುಪಾಲನೆ ಮಾಡಿ ಯಾವುದೇ ಕಾರಣಕ್ಕೂ ರಾಜ್ಯ ವಲಯದ ಈ ಅನುದಾನ lapse ಆಗದಂತೆ ಸ್ಥಳೀಯ ಜಿಲ್ಲಾ ಪಂಚಾಯತ್‌ಗಳ ಅಧಿಕಾರಿಗಳು ಮುಂಜಾಗ್ರತೆ ವಹಿಸತಕ್ಕದ್ದು. ಅನಿವಾರ್ಯವಾದಲ್ಲಿ TP Fund-3 ಯಡಿ ಚಾಲ್ತಿಯಲ್ಲಿರುವ ಮಾರ್ಗಸೂಚಿಗಳನ್ವಯ ಜಮಾ ಮಾಡಿಕೊಂಡು ತಕ್ಷಣ ಅನುದಾನ ವಿನಿಯೋಗ ಸಲುವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದು.
- ಬಾಪೂಜಿ ಸೇವಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ವಯ Performance Grants ಸಲುವಾಗಿ ಸೂಕ್ತ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕೂಡಲೇ ಕಳುಹಿಸುವುದು.
- ಜಿಲ್ಲಾ/ತಾಲ್ಲೂಕು ಯೋಜನಾ ಸಮಿತಿಗಳನ್ನು ಇನ್ನೂ ರಚಿಸದಿರುವ ಜಿಲ್ಲೆಗಳು ಕೂಡಲೇ ಪಂಚಾಯತ್ ರಾಜ್ ಅಧಿನಿಯಮದನ್ವಯ ಸಮಿತಿಗಳನ್ನು ರಚಿಸಿ, ಸಭೆಗಳನ್ನು ನಡೆಸಿ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಬೇಕು ಹಾಗೂ ಸರ್ಕಾರಕ್ಕೆ ವರದಿ ಮಾಡಬೇಕು.

- ಜಿಲ್ಲಾ ವಲಯದಡಿ ವೆಚ್ಚ ಭರಿಸಿರುವ ಎಲ್ಲಾ ಆಡಳಿತಾತ್ಮಕ ಮತ್ತು ಅಭಿವೃದ್ಧಿ ಯೋಜನೆಗಳ ವಿವರಗಳನ್ನು DSS ಕಲಂನಲ್ಲಿ ಸರಿಯಾಗಿ ನಮೂದಿಸಬೇಕು. ಈ ವಿವರಗಳಿಗೆ ವಾಸ್ತವಿಕ ವೆಚ್ಚ ತಾಳೆಯಾಗಬೇಕು ಅಂದರೆ ಖಜಾನೆಯಿಂದ ಸೆಳೆದಿರುವ ಅನುದಾನಕ್ಕೆ ತಾಳೆಯಾಗಬೇಕು. ಪ್ರತಿ ಮಾಹೆ ಈ ಕುರಿತು ರಾಜ್ಯ ಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಂದ ಪರಿಶೀಲನೆ ನಡೆಯಲಿದ್ದು, ಈ ಅಂಕಿ ಅಂಶಗಳ ಆಧಾರದ ಮೇಲೆ ಗ್ರಾಅಪಂ ರಾಜ್ ಇಲಾಖೆಯ ಸಾಧನೆಯ ರ‍್ಯಾಂಕಿಂಗ್ ನಿರ್ಧರಿಸಲಾಗುತ್ತದೆ. ಆದುದರಿಂದ ಇದು ಪ್ರಾಮುಖ್ಯತಾ ವಿಷಯವಾಗಿದೆ ಎಂದು ತಿಳಿಸಲಾಯಿತು.

ಅಂತಿಮವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಾತನಾಡಿ ಪ್ರಸಕ್ತ ಸಾಲಿನಲ್ಲಿ ತೀವ್ರ ಬರವಿದ್ದು ಗ್ರಾಮೀಣ ಭಾಗದ ಜನರು ಗುಳೆ ಹೋಗುವುದನ್ನು ತಡೆಯಲು ಮಾರ್ಚ್‌ನಲ್ಲಿ ನರೇಗಾ ಕಾರ್ಯಕ್ರಮದಡಿ ಹೆಚ್ಚು ಕಾಮಗಾರಿಗಳನ್ನು ಕೈಗೆತ್ತಿಕೊಂಡು 1 ಕೋಟಿ ಮಾನವದಿನಗಳ ಸಾಧನೆ ಮಾಡಲು ತಿಳಿಸಿದರು. ಈಗಾಗಲೇ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಕೂಲಿ ಮತ್ತು ಸಾಮಾಗ್ರಿ ವೆಚ್ಚದ ಬಾಕಿ ಪಾವತಿಗೆ ಕ್ರಮವಾಗಿದ್ದು ಅಗತ್ಯವಿರುವ ಅನುದಾನ ಬಿಡುಗಡೆಯಾಗಿದೆ. ಮುಂಬರುವ ದಿನಗಳಲ್ಲಿ ಬಾಕಿ ಉಳಿದಿರುವ ಸಾಮಾಗ್ರಿ ಬಾಬ್ತು ಅನುದಾನ ಸಹಾ ಬಿಡುಗಡೆ ಆಗಲಿದೆ. ಆದುದರಿಂದ ಕೂಲಿ ಪಾವತಿ ಸಬೂಬು ಇನ್ನು ಮುಂದೆ ಹೇಳುವಂತಿಲ್ಲ.

**2019–20** ರ ಸಾಲಿನಲ್ಲಿ **"ಜಲಾಮೃತ"** ಯೋಜನೆಯನ್ನು ಆಯವ್ಯಯ ಘೋಷಣೆಯನ್ವಯ ನರೇಗಾ ದಡಿ ರೂ.500ಕೋಟಿ ಅಂದಾಜು ವೆಚ್ಚದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕು. ಇದಕ್ಕೆ ರಾಜ್ಯ ಸರ್ಕಾರವು ರೂ.100ಕೋಟಿ ಅನುದಾನ ಹೆಚ್ಚುವರಿಯಾಗಿ ಒದಗಿಸಲಿದೆ. **2019–20ನೇ** ವರ್ಷವನ್ನು **'ಜಲವರ್ಷ'**ವೆಂದು ಘೋಷಣೆ ಮಾಡಲಾಗಿದೆ ಎಂದು ತಿಳಿಸಿದರು. ತದನಂತರ ಯಾವುದೇ ಕಾರಣಕ್ಕೂ ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಸ್ಥಳೀಯ ಅಧಿಕಾರಿಗಳು ಕಾಲಕಾಲಿಕ ಸಭೆ ನಡೆಸಿ ಅಗತ್ಯ ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಂಡು ಜಾಗ್ರತೆಯಾಗಿ ಅನುಷ್ಠಾನ ಮಾಡಬೇಕು ಮತ್ತು ಖಾಸಗಿ Borewell ಗಳ ಸೇವೆ ಪಡೆಯುವುದು ಹಾಗೂ ಸಾಗಾಣಿಕೆ ಮುಖೇನ ನೀರು ಪಡೆಯುವುದು, ಇಂತಹ ಪರಿಹಾರ ಕ್ರಮಗಳನ್ನು ಆಯಾ ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಕೈಗೆತ್ತಿಕೊಳ್ಳತಕ್ಕದ್ದೆಂದು ತಿಳಿಸಿದರು.

ಮೇಲ್ಕಂಡ ಸೂಚನೆಗಳನ್ನು ಪಾಲನೆ ಮಾಡಿ ಅನುಪಾಲನಾ ವರದಿಗಳನ್ನು ನೀಡಲು ಸೂಚಿಸಿ ವಿಡಿಯೋ ಸಂವಾದವನ್ನು ಮುಕ್ತಾಯಗೊಳಿಸಲಾಯಿತು.

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಸಂಖ್ಯೆ:ಗ್ರಾಅಪ/15/ಯೋಉಮಾ/2019 ದಿನಾಂಕ:12/03/2019

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ, ಬೆಂಗಳೂರು.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ. ಬೆಂಗಳೂರು.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್, ಬೆಂಗಳೂರು.
5. ನಿರ್ದೇಶಕರು, ಪಂಚಾಯತ್ ರಾಜ್- 1/ಪಂಚಾಯತ್ ರಾಜ್-2/ಸ್ವ.ಉ.ಕಾ/ಗ್ರಾಮ ವಿಕಾಸ/ಯೋಉಮಾ/ಇ-ಆಡಳಿತ/ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ ರಾಜ್ ಇಲಾಖೆ, ಬೆಂಗಳೂರು.
6. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಕನ್ನಿಂಗ್‌ಹ್ಯಾಂ ರಸ್ತೆ, MSIL Building, ಬೆಂಗಳೂರು.
7. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
9. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
11. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು.
12. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ, ಬೆಂಗಳೂರು.

ಈ ನಡವಳಿ ಪತ್ರವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ upload ಮಾಡಲು ಕೋರಿದೆ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.